# ಬಾಯಲ್ಲಿ ಜ್ವಾಲೆ



ಸಾಮಾನ್ಯವಾಗಿ ಗ್ರಾಮೀಣ ಪ್ರದೇಶದಲ್ಲಿ ಜಾತ್ರಾ ಮಹೋತ್ಸವ ನಡೆದಾಗ ಜಾನಪದ ಕಲಾಪ್ರಕಾರಗಳ ಪ್ರದರ್ಶನವನ್ನು ಆಯೋಜಿಸಲಾಗುತ್ತದೆ. ಈ ಚಿತ್ರದಲ್ಲಿ ಕಾಣುತ್ತಿರುವ ವ್ಯಕ್ತಿಯು ಚಿತ್ರದುರ್ಗದ ಬೆನಕನಹಳ್ಳಿಯ ಮಾಹೇಶ್ವರ ಜಾತ್ರಾ ಮಹೋತ್ಸವದಲ್ಲಿ ಕಂಡುಬಂದ. ಆ ವ್ಯಕ್ತಿಯು ವೀರಗಾಸೆ ಕಲೆಯನ್ನು ಪ್ರದರ್ಶಿಸುತ್ತಿದ್ದಾಗ ಈ ಚಿತ್ರ ಸೆರೆಹಿಡಿಯಲಾಯಿತು. ವೀರಗಾಸೆ ಕುಣಿತ ಮಾಡುವವರು ಸಾಮಾನ್ಯವಾಗಿ ಬಾಯಲ್ಲಿ ಕರ್ಪೂರ ಇಟ್ಟು, ಅದಕ್ಕೆ ಬೆಂಕಿ ಹಚ್ಚಿ ಕುಣಿಯುವುದಿಲ್ಲ. ಆದರೆ, ಈ ಚಿತ್ರದಲ್ಲಿ ಕಾಣುತ್ತಿರುವ ವ್ಯಕ್ತಿಯು ಬೆಂಕಿ ಹೊತ್ತಿದ ಕರ್ಪೂರದ ಉಂಡೆಯನ್ನು ತನ್ನ ಬಾಯಲ್ಲಿ ಇಟ್ಟುಕೊಂಡು ಕುಣಿತ ಪ್ರದರ್ಶಿಸಿದರು. ದೂರದಿಂದ ಈ ದೃಶ್ಯವನ್ನು ಕಂಡವರಿಗೆ ಈ ವ್ಯಕ್ತಿ ತನ್ನ ಬಾಯಿಂದ ಬೆಂಕಿಯ ಜ್ವಾಲೆಯನ್ನು ಉಗುಳಲು ಸಜ್ಜಾಗುತ್ತಿದ್ದಂತೆ ಕಾಣುತ್ತದೆ.

—ಗಿರೀಶ್ ಎಲ್.ಸಿ., ಭದ್ರಾವತಿ



# ವಂಶಾವಳಿ ಹೇಳುವ ಹೇಳವರು

ಹೇಳವರು ಬರುವ ಕಾಲವಿದು. ಹೇಳವರು ಅಂದರೆ ಒಂದು ವಂಶದ ಪೂರ್ವಿಕರಿಂದ ಹಿಡಿದು ಅವರ ತಲೆಮಾರುಗಳ ಇತಿಹಾಸವನ್ನು ಬರೆದಿಟ್ಟು, ಅಂದಿನಿಂದ ಇಂದಿನವರೆಗೂ ಅದನ್ನು ಬೆಳೆಸುತ್ತಲೇ ಹೊಸಪೀಳಿಗೆಯ ಹುಟ್ಟನ್ನು ದಾಖಲಿಸುತ್ತಾ ಬರುವವರು. ಉತ್ತರ ಕರ್ನಾಟಕದ ಬಹುತೇಕ ಕಡೆ ಈ ಪದ್ಧತಿ ಇನ್ನೂ ಜಾರಿಯಲ್ಲಿದೆ. 'ಹೇಳುವ ಅಂದ್ರ ಮನಿ ಮಗ ಇದ್ದಂಗ' ಅಂತ ನಮ್ಮ ಹಿರಿಯರು ಹೇಳುತ್ತಿದ್ದರು. ವರ್ಷಕ್ಕೊಮ್ಮೆ ಬರುವ ಅವರು ವಂಶಾವಳಿ ಹೇಳುವ ಕುಟುಂಬದೊಂದಿಗೆ ಅವಿನಾಭಾವ ನಂಟು ಹೊಂದಿರುತ್ತಾರೆ. ಬೆಳಗಾವಿ ಜಿಲ್ಲೆಯಲ್ಲಿ ಹೆಚ್ಚಾಗಿ ಕಂಡು ಬರುವ ಹೇಳವರು, ಈ ಸಮಯದಲ್ಲಿ ತಮ್ಮ ವಂಶಾವಳಿ ಹೇಳುವ ಮನೆಗೆ ಹೋಗಿ ಬರುತ್ತಾರೆ. ಈ ವಂಶಾವಳಿಯನ್ನು ನ್ಯಾಯಾಲಯವು ಒಪ್ಪಿಕೊಳ್ಳುತ್ತದೆ ಎನ್ನುವುದು ವಿಶೇಷ. (ಒಳಚಿತ್ರ—ಮಾಹಿತಿ ದಾಖಲಿಸುವ ಪುಸ್ತಕ)

—ನಾಗರಾಜನಾಯಕ ಡಿ. ಡೊಳ್ಳಿನ, ಕೊಪ್ಪಳ

# ವಿಭಿನ್ನ ಆಲೂಗಡ್ಡೆ

ಒಂದೊಂದು ಆಯಾಮದಿಂದ ಬೇರೆ ಬೇರೆ ರೂಪದಿಂದ ಕಾಣುವ ಈ ಆಲೂಗಡ್ಡೆ ನೋಡಲು ವಿಚಿತ್ರವಾಗಿದೆ. ಭೋಜನ ಪ್ರಿಯರಿಗೆ ಈ ಆಲೂಗಡ್ಡೆಯನ್ನು ಕತ್ತರಿಸಿ ಪಲ್ಯ ಮಾಡಿ ಸವಿಯಬೇಕು ಎನಿಸಿದರೆ, ಕವಿಗಳ ಕವನಕ್ಕೆ ಸ್ಫೂರ್ತಿಯಾಗಿದೆ. ಆಸ್ತಿಕರಿಗೆ ದೈವಿ ಸ್ವರೂಪದಂತೆ ಕಂಡರೆ, ನಾಸ್ತಿಕರಿಗೆ ಇನ್ನೇನೊ ಅನಿಸುತ್ತದೆ. ಕೃಷಿ ವಿಜ್ಞಾನಿಗಳಿಗೆ ಬೇರೊಂದು ತಳಿ ಸಂಶೋಧನೆಗೆ ಸಹಾಯವಾದರೆ, ಲೇಖಕನಿಗೆ ಒಂದು ಲೇಖನಕ್ಕೆ ಸ್ಫೂರ್ತಿಯಾಗುವಂತಿದೆ ಈ ಆಲೂಗಡ್ಡೆ.

—ಎಂ.ಎಸ್. ಧರ್ಮೇಂದ್ರ, ಬೆಂಗಳೂರು

